# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 18-11-2022

**ಸಿ.ಇ.ಎನ್ ಪೊಲೀಸ ಠಾಣೆ ಬೀದರ ಅಪರಾಧ ಸಂಖ್ಯೆ 17/2022 ಕಲಂ 419, 420 ಐಪಿಸಿ ಮತ್ತು 66(ಡಿ) ಐ.ಟಿ. :-**

ದಿನಾಂಕ:17-11-2022 ರಂದು ಬೆಳಗ್ಗೆ 9:30 ಗಂಟೆಗೆ ಫಿರ್ಯಾದಿ ಶ್ರೀ ಓಂಕಾರ ತಂದೆ ಧೂಳಯ್ಯಾ ಸ್ವಾಮಿ ಮು||ಬೇಳಕುಣಿ ಚೌದ್ರಿ ತಾ|| ಔರಾದ (ಬಿ) ರವರು ಪೊಲೀಸ್ ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ ಓಂಕಾರ ತಂದೆ ಧೂಳಯ್ಯಾ ಸ್ವಾಮಿ ವಯ: 32 ವರ್ಷ, ಮು: ಬೆಳಕುಣಿ ಚೌದ್ರಿ ಇದ್ದು ದಿನಾಂಕ:01-11-2022 ರಂದು **Teligram messenger** ನಲ್ಲಿ Pihu ಎಂಬ ಹೆಸರಿನವರು (ಮೊಬೈಲ ನಂಬರ ಇರಲಿಲ್ಲ) ಒಂದು ಮೇಸೆಜ್ ಕಳುಹಿಸಿದ್ದು ಅದರಲ್ಲಿ ತಾನು **Randstad** ಕಂಪನಿಯಲ್ಲಿ ಮ್ಯಾನೇಜರಾಗಿದ್ದು, ಗಂಟೆಗೆ 1000 ರಿಂದ 2200 ರೂ ವೇತನ ಸಿಗುವ ನೌಕರಿ ಕೊಡುತ್ತೇವೆ ಅಂತ ತಿಳಿಸಿದ್ದು, ಹೆಂಡತಿ ಶೃತಿ ಸಲುವಾಗಿ ನೌಕರಿ ಹುಡುಕುತ್ತಿದ್ದರಿಂದ ಇದಕ್ಕೆ ಪ್ರಯತ್ನ ಮಾಡೋಣ ಅಂತ ವಿಚಾರ ಮಾಡಿ ಮರು ದಿವಸ ನೌಕರಿಯ ವಿವರ ಕೇಳಿದಾಗ ಅವರು ಎಲ್ಲಾ ವಿವರ ತಿಳಿಸಿ ಆದಷ್ಟು ಬೇಗ ಕಂಪನಿಯವರು ನಿಮ್ಮನ್ನು ಸಂಪರ್ಕಿಸುತ್ತಾರೆ ಅಂತ ಹೇಳಿದರು. ನಂತರ Ananya ಎಂಬುವರು (ಮೊಬೈಲ ನಂಬರ ಇರಲಿಲ್ಲ) **Teligram** ನಲ್ಲಿ ಮೇಸೆಜ್ ಮಾಡಿ ಕಂಪನಿ ಹಾಗು ನೌಕರಿ ಬಗ್ಗೆ ವಿವರ ತಿಳಿಸಿ ಕಂಪನಿ ಕಾಯಕ ಟ್ರಾವೇಲ್ ಮ್ಯಾನೇಜಮೆಂಟ್ ಲಿಮಿಟೇಡ್ ಅಂತ ಇದ್ದು ಪ್ರಯಾಣ ನಿರ್ವಹಣ ಮತ್ತು ಪ್ರವಾಸಿ ಆಧಾರಿತ ವ್ಯಾಪಾರ ಉತ್ತೇಜನೆ, ಸುಧಾರಣೆ ಹಾಗು ವರ್ಧನೆಗೆ ಸಹಾಯ ಮಾಡಲು ಪ್ರವಾಸಿ ಆಕರ್ಷಣೆ ಮಾಡುವ ಕೆಲಸ ಕೈಗೊಳ್ಳುತ್ತೇವೆ. ನೀವು 30 ಟಾಸ್ಕಳಿಗೆ ರೇಟಿಂಗ್ ಕೊಟ್ಟಲ್ಲಿ ನಿಮಗೆ ಆದಾಯ ಸಿಗುತ್ತದೆ. ನೀವು ಮನೆಯಲ್ಲಿಯೆ ಕುಳಿತು ಕೆಲಸ ಮಾಡಬಹುದು ಅಂತ ವಿವರ ತಿಳಿಸಿ ರೇಜಿಸ್ಟ್ರçÃಶನ ಮಾಡಲು **https://www.mytravelwork.com** ನೇದ್ದು ಕಳುಹಿಸಿದ್ದು ಫಿರ್ಯಾದಿಯು ಅದರಲ್ಲಿ ನೊಂದಣಿ ಮಾಡಿಸಿ ಕೆಲಸ ಶುರು ಮಾಡಿದ್ದು ಅದಕ್ಕೆ 880 ರೂ ಫಿರ್ಯಾದಿಯ ಖಾತೆಗೆ ಕಮಿಶನ ಜಮಾ ಆಗಿರುತ್ತದೆ. ನಂತರ ಅವರು 30 ಟಾಸ್ಕ ಮಾಡಲು ಅವರ ಖಾತೆಗೆ 10,000 ರೂ ಜಮಾ ಮಾಡಲು ತಿಳಿಸಿದಾಗ ಫಿರ್ಯಾದಿಯು ಹಣ ಇಲ್ಲ ಅಂತ ತಿಳಿಸಿ ಹಣ ಜಮಾ ಮಾಡಲಿಲ್ಲ ಆದರೆ ಅವರು ಪುನ: ಪುನ: ಮೇಸೆಜ್ ಮಾಡಿ ಒಳ್ಳೆಯ ಅವಕಾಶವಿದೆ ಅಂತ ಹೇಳಿದ್ದರಿಂದ ಫಿರ್ಯಾದಿಯು ದಿನಾಂಕ: 07-11-2022 ರಂದು 10,000 ರೂ ಅವರು ನೀಡಿದ **Yes bank A/C No.** 034863300005285 ನೇದ್ದಕ್ಕೆ ಜಮಾ ಮಾಡಿದ್ದು ನಂತರ ನಾನು 30 ಟಾಸ್ಕ ಪೂರ್ತಿಗೊಳಿಸಿದ ಮೇಲೆ ಫಿರ್ಯಾದಿ ಖಾತೆಗೆ 13,000, 34,605 ಮತ್ತು 85,729 ರೂ ಜಮಾ ಆಗಿರುತ್ತದೆ. ನಂತರ ದಿನಾಂಕ: 11-11-2022 ರಂದು ಮತ್ತೆ ಟಾಸ್ಕಾಗಿ 10,000 ರೂ ಜಮಾ ಮಾಡಿದ್ದು ಆಗ ಅವರು 30 ಟಾಸ್ಕ ಪೂರ್ತಿಮಾಡಲು ಮತ್ತೆ ಹಣ ಜಮಾ ಮಾಡಬೇಕೆಂದು 10 ನೇ ಟಾಸ್ಕ್ ನಿಲ್ಲಿಸಿದರು ಆಗ ಅವರಿಗೆ ಕೇಳಿದಾಗ ನಿಮ್ಮ ಕಮಿಷನ ಜಾಸ್ತಿ ಇದೆ ಅಂತ ಹೇಳಿ 48,100 ರೂ ಹಾಕಿಸಿಕೊಂಡರು ಆ ಮೇಲೆ ಪೂರ್ತಿ 30 ಟಾಸ್ಕ ಆದ ಮೇಲೆ ನಿಮಗೆ ಸಿಗುವ ಕಮಿಶನ ಹಣ ಹಾಗು ನೀವು ಜಮಾ ಮಾಡುವ ಹಣ ನಿಮಗೆ ಕೊಡಲಾಗುತ್ತದೆ. ಅಂತ ಹೇಳಿ 20 ನೇ ಟಾಸ್ಕ್ 1,62,000 ರೂ, 25 ನೇ ಟಾಸ್ಕ್ 3,85,396 ರೂ, 29 ನೇ ಟಾಸ್ಕ್ 5,74,737 ರೂ ಹಾಗು 30 ನೇ ಟಾಸ್ಕ್ 6,31,469 ರೂ ಹಾಕಿಸಿಕೊಂಡರು 30 ಟಾಸ್ಕ ಆದ ನಂತರ ಸದರಿಯವರ **https://www.kayakwork.com** ಸೈಟನಲ್ಲಿ ಖಾತೆಯಲ್ಲಿ ಫಿರ್ಯಾದಿಯು ಜಮಾ ಮಾಡಿದ ಹಣ ಮತ್ತು ಕಮಿಶನ ಹಣ ಸೇರಿ ಬ್ಯಾಲೇನ್ಸ ಇದ್ದು ಆದರೆ ನನಗೆ ಸದರಿ ಹಣ ವಿತ್ ಡ್ರಾ ಆಗಲಿಲ್ಲ ಅದಕ್ಕೆ ಅವರು ನೀವು ವಿಶೇಷ ಸ್ಥಾನ ಮಾನ ಹೊಂದಿದ್ದಿರಿ ನಿಮಗೆ ಜಾಸ್ತಿ ಕಮೀಶನ ಸಿಗುತ್ತೇ ಇನ್ನೂ 5 ಟಾಸ್ಕ ಮಾಡಲೇ ಬೇಕು ಅಂತ ಹೇಳಿ 7,30,000 ರೂ ಹಾಕಿಸಿಕೊಂಡರು 35 ಟಾಸ್ಕ ಪೂರ್ತಿ ಮಾಡಿದ ಮೇಲೆ ಹಣ ವಿತ್ ಡ್ರಾ ಆಗಲಿಲ್ಲ ಈ ಬಗ್ಗೆ ಅವರಿಗೆ ಕೇಳಲು ಅವರು ಕಂಪನಿಯ ನಿಮಯದ ಪ್ರಕಾರ ಇನ್ನೂ ನೀವು 14 ಲಕ್ಷ ರೂ ಜಮಾ ಮಾಡಬೇಕು ಅಂತ ಹೇಳುತ್ತಿದ್ದಾರೆ. ಫಿರ್ಯಾದಿಯು ನನ್ನ ಹಣ ನನಗೆ ವಾಪಸ್ಸ ಕೊಡಿ ಅಂತ ಕೇಳಿದರು ಅವರು ಏನಾದರು ಒಂದು ಕಾರಣ ಹೇಳಿ ಕೊಡುತ್ತಿಲ್ಲ ಸದರಿ ವ್ಯಕ್ತಿಗಳು ಟ್ರಾವೇಲ್ ಕಂಪನಿ ಅಂತ ಸುಳ್ಳು ಹೇಳಿ ನನಗೆ ನೌಕರಿ ಮತ್ತು ಹಣದ ಆಸೆ ತೊರಿಸಿ ಮೋಸದಿಂದ ನನ್ನಿಂದ ಹಣ ಹಾಕಿಸಿಕೊಂಡು ವಂಚನೆ ಮಾಡಿದ್ದು ಕಂಡುಬAದಿತು. ಸದರಿ ವ್ಯಕ್ತಿಗಳು ಫಿರ್ಯಾದಿಯ ಒಟ್ಟು 25,59,532=00 ರೂ ಮೋಸದಿಂದ À ಖಾತೆಗಳಿಗೆ ಹಾಕಿಸಿಕೊಂಡಿದ್ದು ಅವುಗಳಲ್ಲಿ ನಾನು 1,34,157=00 ರೂ ವಿತ್ ಡ್ರಾ ಮಾಡಿಕೊಂಡಿರುತ್ತೇನೆ. ಸದರಿ ವ್ಯಕ್ತಿಗಳು ಟ್ರಾವೇಲ್ ಕಂಪನಿ ಅಂತ ಸುಳ್ಳು ಹೇಳಿ ನೌಕರಿ ಮತ್ತು ಹಣದ ಆಸೆ ತೊರಿಸಿ ನನ್ನಿಂದ ಹಣ ಹಾಕಿಸಿಕೊಂಡು ಒಟ್ಟು 24,25,375=00 ರೂ ವಂಚನೆ ಮಾಡಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

**ಬಸವ ಕಲ್ಯಾಣ ಸಂಚಾರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 67/2022 ಕಲಂ 279,304 (ಎ) ಐಪಿಸಿ ಜೊತೆ 177, 187 ಮೋ. ವಾ ಕಾಯ್ದೆ. :-**

ದಿನಾಂಕ 17/11/2022 ರಂದು 18:00 ಗಂಟೆಗೆ ಬಸವಕಲ್ಯಾಣ ಸರಕಾರಿ ಆಸ್ಪತ್ರೆಯಿಂದ ಫೊನ್ ಮುಖಾಂತರ ಎಮ್.ಎಲ್.ಸಿ ಮಾಹಿತಿ ಬಂದ ಮೇರೆಗೆ ಆಸ್ಪತ್ರೆಗೆ ಭೇಟಿ ನೀಡಿ ಫಿರ್ಯಾದಿ ಶ್ರೀ ವೀರಶೆಟ್ಟಿ ತದೆ ಭೀಮಣ್ಣಾ ಮುಸ್ತರಿ,ವಯ : 45 ವರ್ಷ, ಜಾ : ಎಸ್.ಟಿ (ಗೊಂಡ), ಉ : ವ್ಯಾಪಾರ, ಸಾ : ಬೆಮಳಖೇಡಾ ರವರು

ಹಾಜರು ಪಡಿಸಿದ ಲಿಖಿತ ದೂರನ್ನು ಪಡೆದುಕೊಂಡಿದ್ದು ಸಾರಂಶವೆನೆAದರೆ, ಫಿರ್ಯಾದಿ ತಮ್ಮ ನರಸಪ್ಪಾ ವಯ : 35 ವರ್ಷ, ಇವನು ರಾಜೆಶ್ವರ ಗ್ರಾಮದಲ್ಲಿ ಇರುವ ವೈನ್ ಶಾಪನಲ್ಲಿ ಕೂಲಿ ಕೆಲಸ ಮಾಡಿಕೊಂಡು ಹೆಂಡತಿ ಮಕ್ಕಳೊಂದಿಗೆ ತಡೋಳಾ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾನೆ, ಅವನು ದಿನಾಲು ತಡೋಳಾ ಗ್ರಾಮದಿಂದ ರಾಜೇಶ್ವರ ಗ್ರಾಮಕ್ಕೆ ಮೋಟರ ಸೈಕಲ್ ಮೇಲೆ ಹೋಗಿ ಬರುವದು ಮಾಡುತ್ತಾನೆ, ಹೀಗಿರುವಾಗ ದಿನಾಂಕ 17/11/2022 ರಂದು ಮಿಥುನ ರಾಠೋಡ ಎಂಬುವವರು ತಿಳಿಸಿದ್ದೇನೆಂದರೆ, ನಾನು ನನ್ನ ಮೋಟರ ಸೈಕಲ್ ಮೇಲೆ ತಡೋಳಾ ಗ್ರಾಮದಿಂದ ರಾಜೇಶ್ವರ ಗ್ರಾಮಕ್ಕೆ ಹೋಗುತ್ತಿದ್ದು, ನನ್ನಂತೆ ನರಸಪ್ಪಾ ಮುಸ್ತರಿ ಇವನು ಸಹ ತನ್ನ ಮೋಟರ ಸೈಕಲ್ ಮೇಲೆ ಮುಂದೆ ಹೋಗುತ್ತಿದ್ದನು, ಆಗ ಎದುರಿನಿಂದ ಅಂದರೆ ರಾಜೇಶ್ವರ ಕಡೆಯಿಂದ ರಾಂಗ್ ಸೈಡಿನಿಂದ ಗೂಡ್ಸ ವಾಹನ ಸಂಖ್ಯೆ ಕೆಎ-38-ಎ-3094 ನೇದರ ಚಾಲಕ ತನ್ನ ವಾಹನವನ್ನು ಅತಿವೇಗದಿಂದ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ತನ್ನ ಸೈಡಿನಿಂದ ಹೋಗುತ್ತಿದ್ದ ನರಸಪ್ಪಾ ಈತನ ಮೋಟರ ಸೈಕಲಿಗೆ ಡಿಕ್ಕಿ ಮಾಡಿದನು ಇದರಿಂದ ನರಸಪ್ಪಾ ಇವನು ರಸ್ತೆಯ ಬಲಭಾಗದಲ್ಲಿ ಬಿದ್ದಿದ್ದರಿಂದ ಸದರಿ ಗೂಡ್ಸ ವಾಹನದ ಟೈರ್ ಆತನ ಮೇಲಿಂದ ಹಾಯ್ದು ಹೋಗಿ ಸ್ವಲ್ಪ ಮುಂದೆ ಹೋಗಿ ವಾಹನ ಚಾಲಕನು ತನ್ನ ಗೂಡ್ಸ ವಾಹನ ಬಿಟ್ಟು ಓಡಿ ಹೋದನು, ಇದರಿಂದ ನರಸಪ್ಪನು ಭಾರಿ ಗಾಯಗಳಾಗಿ ಸ್ಥಳದಲ್ಲೆ ಮೃತ ಪಟ್ಟಿರುತ್ತಾನೆ ಅಂತಾ ನೀಡಿದ ದೂರಿನ ಮೆರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.